Reg.NO. M. 1050.
"KODAGU" MERCARA, (Coorg).

-21-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೬ | ತಾರೀಕು ೨೦—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೧

— ಕೊಡಗಿನಲ್ಲಿ ಜಾನುವಾರುಗಳ ಸುಧಾರಣಾಕ್ರಮ —

ಲೇಖಕರು-ಶ್ರೀ ಎಸ್. ಎನ್. ತಮ್ಮಯ್ಯನವರು, ರಿ ವೆಟರಿನರಿ ಆಫೀಸರು, ಮದ್ರಾಸು.

—0—

ವ್ಯವಸಾಯವು ಹಿಂದೂದೇಶದವ
ಜೀವನದ ಅಡಿಗಲ್ಲಾಗಿರುವಂತೆ, ವ್ಯ
ಾಯಕ್ಕೆ ಜಾನುವಾರುಗಳ ಸಂಪ
ಭಿವೃದ್ಧಿಯೇ ಮೂಲಾಧಾರವಾಗಿ
ವ್ಯವಸಾಯದಲ್ಲಿ ಪ್ರಧಾನ್ಯತೆಯು
ಪಡೆದ ಕೊಡಗು ದೇಶಕ್ಕೆ ಮೇಲಿ
ತತ್ವವು ಅಕ್ಷರಶಃ ಅನ್ವಯಿಸುತ್ತದೆ.
ಪ್ರಕೃತಿಯು ಸೌಂದರ್ಯದ ಬೀ
ದ ಕೊಡಗು ದೇಶದಲ್ಲಿ ಮಳೆಗಾಗ
, ಜಾನುವಾರುಗಳ ಮೇವಿಗಾಗಲೀ
ಷ್ಟಿನ ತೊಂದರೆ ಇರುವುದಿಲ್ಲ. ಈ
ಕಾರ್ಯಗಳಿಂದ ಕೂಡಿದ ನಮ್ಮ ದೇ
ಶ, ಅಲ್ಲಿಗೆ ಬೇಕಾದ ದನಕರುಗಳ
ಸಾಕುವ ಕ್ರಮವನ್ನು ಕೈಗೊಳ್ಳ
ನೆರೆಪ್ರಾಂತ್ಯವಾದ ಮೈಸೂರು ದೇ
ನ್ನು ಆಶ್ರಯಿಸಿಕೊಂಡಿರುವುದು
ಬಾ ವಿಶಾದಕರವಾದ ಸಂಗತಿಯೂ
. ಆವರ ಬದಲು ಈ ದೇಶಿಯ
ಹೇರಳವಾದಷ್ಟು ಜಾನುವಾರುಗ
ನ್ನು ಸಾಕಿ ಸಲಹಿ ತಮ್ಮನ್ನು ತಾ
ಉದ್ಧಾರಮಾಡಿಕೊಳ್ಳುವುದಲ್ಲದೆ,
ೃಷಿಯ ವೃದ್ಧಿಯಿಂದ ಹೆಚ್ಚಾಗಿರು
ರಾಸುಗಳನ್ನು ನೆರೆಪ್ರಾಂತ್ಯಗಳಾದ
ಲ್ಲಬಾರಿಗಾಗಲೀ, ದಕ್ಷಿಣ ಕನ್ನಡ
ಸ್ಟಿಗಾಗಲೀ ರಫ್ತುಮಾಡಿ, ಆದಾಯ
ನ್ನು ಪಡೆಯುವ ಸಾಧ್ಯತೆ ಇದೆ.

ಮೈಸೂರು ಮತ್ತು ಮದ್ರಾಸು
ಸ್ಟಿಯವರಿಗೆ ಉಪಯೋಕ್ತವಿಲ್ಲದ
ದಾಜು ಒಂದು ಲಕ್ಷದ ಐವತ್ತು
ವಿರ ರೂಪಾಯಿಗಳಷ್ಟು ಬೆಲೆ ಬಾ
ವ ದನಕರಗಳು ಕೊಡಗಿಗೆ ಪರ್ಷಾ
ಿ ಮೂರಾಟಕ್ಕೆ ಬರುತ್ತಿರುತ್ತವೆ.
ನೇಕ ಸಂದರ್ಭಗಳಲ್ಲಿ ದನಗಳಿಗೆ
ಂಕ್ರಾಮಿಕ ರೋಗಗಳು ಹಳ್ಳಿಗಳ
ತಲೆಮೋರಲು, ಆ ದೇಶಿಯರು ಹ
ನ ಗಳಿಸುವ ಉದ್ದೇಶದಿಂದ ದ
ಕರುಗಳನ್ನು ನಮ್ಮ ದೇಶಕ್ಕೆ ಸಾ
ಿ ಇಲ್ಲಿ ಖಾಯಿಲೆ ಹಬ್ಬಲು ಕಾ
ಣವಾಗಿ ಪರಿಣಮಿಸಿದೆ.
ಪ್ರಯುಕ್ತ ನಮ್ಮಲಿರುವ ದನಕರ
ಗೂ ಕೂಡ ಈ ಭಯಂಕರ ಜಾಡ್ಯ
ತಲೆದೋರಿ ಅತಿ ದಾರುಣವಾದ
ಃಖವನ್ನು ರೈತಾಪಿ ಜನರು ಅನು
ವಿಸಬೇಕಾಗಿದೆ. ಸಾಂಕ್ರಾಮಿಕ
ೋಗಗಳ ಹಾವಳಿಯನ್ನು ತಡೆಗಟ್ಟ
ಬೇಕಾದರೆ, ನಮ್ಮ ದೇಶೀಯರು ಈ
ದೇಶಕ್ಕೆ ಅನ್ವಯಿಸುವ ದನಕರುಗಳ
ನ್ನು ಸಾಕುವ ಕ್ರಮಗಳನ್ನು ಕೈಕೊ
ಳ್ಳಬೇಕಾಗಿದೆ. ಎಂದಿನ ವರೆಗೆ ಈ
ದೇಶಿಯರು ಜಾನುವಾರುಗಳನ್ನು ಹೆ
ಚ್ಚಾದ ಸಂಖ್ಯೆಯಲ್ಲಿ ಸಾಕಲು ಪ್ರಯ
ತ್ನಪಡುವುದಿಲ್ಲವೋ ಅಂದಿನ ವರೆಗೆ ಈ
ದೇಶೀಯರ ಸಂಪದಾಭಿವೃದ್ಧಿಯೂ,
ಆರೋಗ್ಯಜೀವನವೂ ಮುಂದುವರಿಯ
ಲಾರದೆಂಬುದು ಖಚಿತವಾದ ಸಂಗತಿ
ಯಾಗಿದೆ.

ಮಲೆನಾಡಾದ ಈ ದೇಶದಲ್ಲಿ ಜ
ನಸಾಮಾನ್ಯರಲ್ಲಿ ಮಲೇರಿಯಾ ಮೊದ
ದಲಾ ಅನೇಕ ತರದ ವ್ಯಾಧಿಗಳು ಹ
ರಡಿ, ಆರೋಗ್ಯಜೀವನವು ಬಹಳ ಮ
ಟ್ಟಿಗೆ ಹಾಳಾದುದರಿಂದ ದೇಶಿಯಿಂದ ಬ
ಡತನವು ದಿನೇ ದಿನೇ ಹೆಚ್ಚಾಗುತ್ತಿದೆ.
ಇದನ್ನು ಪರಿಹರಿಸಲು ಪೌಷ್ಟಿಕ ಮ
ತ್ತು ಬಲವರ್ಧಕ ಆಹಾರವನ್ನು ಸೇವಿ
ಸಬೇಕಾಗಿದೆ. ಪ್ರಪಂಚದಲ್ಲಿ ಹಾಲಿ
ಗಿಂತಲೂ ಉತ್ತಮವಾದ ಆಹಾರವ
ಸ್ತುವು ಬೇರೆಯಾವುದೂ ಇಲ್ಲ. ಮ
ಕ್ಕಳಿಂದ ಹಿಡಿದು ಮುದುಕರವರಿವಿ
ಗೂ ಶರೀರದ ಪೋಷಣೆಗೆ ಬೇಕಾದ
ಮತ್ತು ಆಯುರ್ವರ್ಧಕ ವೆಂದೆನ್ನಿಸಿ
ಕೊಂಡ ಹಾಲಿನ ಅಂಶವು ಪ್ರತಿನಿತ್ಯ
ದ ಆಹಾರದಲ್ಲಿ ಕಡಿಮೆಯಾಗಲು ಜನ
ತೆಯಲ್ಲಿ ನಾನಾ ರೋಗಾದಿಗಳೂ, ಮ
ಕ್ಕಳಲ್ಲಿ ಆಕಾಲ ಮರಣಗಳೂ ಉಂಟಾ
ಗುತ್ತವೆ.

ಕೊಡಗು ದೇಶದ ¼ ಭಾಗದ
ಭೂಮಿ ಮಾತ್ರ ವ್ಯವಸಾಯ ರೂಪದ
ಲ್ಲಿಯೂ ಬಾಕಿ ಕಾಡಾಗಿ ಜಾನುವಾ
ರುಗಳ ಮೇವಿಗೆ ಅನುಕೂಲವಾಗಿ
ಯೂ ಇದೆ. ಬೇರೆ ಕೆಲವು ದೇಶಗಳ
ಲ್ಲಿ ದನಕರುಗಳ ಮೇವಿಗೆ ಅನುಕೂಲ
ವಿಲ್ಲದಿದ್ದರೂ ಆ ದೇಶೀಯರು ಅವರ
ವ್ಯವಸಾಯಕ್ಕೂ ಮತ್ತು ಕರುವಿಗೂ
ಬೇಕಾದ ದನಗಳನ್ನು ಸಾಕುವ ಪ್ರಯ
ತ್ನವನ್ನು ಕೈಗೊಂಡು ಸಾಂಕ್ರಮಿಕ
ರೋಗದ ಹುಟ್ಟನ್ನು ಅಡಗಿಸಿರುವ ನಿ
ದರ್ಶನಗಳು ಹಲವಾರು ಇವೆ.

ಬಹಳ ಬುದ್ಧಿವಂತರೆಂದೂ, ಜೀ
ವನದ ತರಗತಿಯಲ್ಲಿ ಉಚ್ಚತರಗತಿ
ಯವರೆಂದೂ, ಕೀರ್ತಿಯನ್ನು ಪಡೆದ
ಈ ದೇಶೀಯರಲ್ಲಿ ದೇಶದ ಏಳಿಗೆಗೆ ಬೇ
ಕಾದ ಜಾನುವಾರುಗಳನ್ನು ಸಾಕುವು
ದರಲ್ಲಿ ಅಭಿರುಚಿಯು ಕಂಡುಬರುವುದಿ
ಲ್ಲ. ಯುದ್ಧದ ನಂತರ ಜರಗುವ
ದೇಶದ ಪುನರ್ರಚನಾಕ್ರಮದಲ್ಲಿ ಒಂ
ದಾದೆ, ಜಾನುವಾರುಗಳ ಸಾಕುವಿಕೆ
ಯ ಯೋಜನೆಯನ್ನು ದೇಶೀಯರು
ಕೂಡಲೇ ಕೈಗೊಂಡು 5 ವರ್ಷಗಳಲ್ಲಿ
ದೇಶಕ್ಕೆ ಬೇಕಾದ ದನಗಳನ್ನು ಈ ಕೆ
ಳಗಿನ ನಿಯಮಗಳಿಗನುಸಾರವಾಗಿ
ಸಾಕಲು ಪ್ರಯತ್ನಿಸಬೇಕೆಂಬುದೇ ಈ
ಲೇಖನದ ಉದ್ದೇಶವಾಗಿದೆ.

ನಿಯಮಗಳು:-1) ದೊಡ್ಡ ರೋ
ಗಬಾರದಂತೆ ಊರಿನ ಎಲ್ಲಾ ದನಗಳ
ಗೆ ವರ್ಷಕ್ಕೊಮ್ಮೆ ಡಾಕು ಹಾಕಿಸಿಕೊ
ಳ್ಳಬೇಕು.

2) ಹೊಸದಾಗಿ ಸಂತೆಯಿಂದ ತೆ
ಗೆದುಕೊಂಡ ರಾಸುಗಳನ್ನು 21 ದಿವ
ಸ ಹಿಂಡಿಗೆ ಸೇರಿಸದೆ ಬೇರೆ ಇಡಬೇ
ಕು. ಆಥವ ಮೈಸೂರಿಂದ ಬರುವ
ಎಲ್ಲಾ ದನಗಳಿಗೂ ಡಾಕು ಹಾಕಿಸಿ
ಕೊಡಗಿನ ಗೇಟಿನಲ್ಲಿ 21 ದಿನ ಇಡಿಸ
ಬೇಕು.

3) ರೋಗ ತಗಲಿ ಮರಣ ಹೊಂ
ದಿದ ಎಲ್ಲಾ ಜಾನುವಾರುಗಳನ್ನು ಹೂ
ಗಿದುಬಿಡಬೇಕು.

4) ಅವುಗಳ ಚರ್ಮವನ್ನು ಮಂಡಿ
ಯನರ ಕೈಸೇರದಂತೆಯೂ ಮೊಸವು
ನಾಯಿನರಿಗಳಿಗೆ ಸಿಕ್ಕದ ಹಾಗೆಯೂ
ಮಾಡಬೇಕು.

5) ಕಾಯಿಲೆ ಇರುವ ಕಡೆಯಿಂ
ದ ದನಕರುಗಳನ್ನು ಕಾಯಿಲೆ ಇಲ್ಲದ
ಕಡೆಗೆ ಒಯ್ಯಬಾರದು.

6) 5 ರಾಸಿಗೆ ಒಂದು ಎಕರಿನ
ಮೇರೆ ಮೇವಿಗಾಗಿ ಸಾಕಷ್ಟು ಜಾಗ
ಕ್ಕೆ ಬೇಲಿಹಾಕಿ ಇಡಬೇಕು.

7) ದನವ ಕೊಟ್ಟಿಗೆಗಳು ಗಾಳಿ
ಬೆಳಕಿಗೆ ಅನುಕೂಲವಾಗಿದ್ದು, ಗಂಜ
ಳ ವಗೈರೆ ಹರಿದು ಹೋಗುವಂತೆ ಮಾ
ಡಿ, ದನಗಳನ್ನು ಕಟ್ಟಿ ಹಾಕಲು
ಯೋಗ್ಯ ರೀತಿಯಲ್ಲಿರಬೇಕು. ಸಗ
ಣಿಗುಂಡಿಯು ಜಾನುವಾರುಗಳ ಕೊ
ಟ್ಟಿಗೆಯಿಂದ ಬಹಳ ದೂರದಲ್ಲಿರ
ಬೇಕು.

8) ಗ್ರಾಮದಲ್ಲಿರುವ ಎಲ್ಲಾ
ಹೋರಿಗಳ ಬೀಜವನ್ನು ತೆಗಿಸಿ ಆಯೂ
ಯ ಪ್ರದೇಶಕ್ಕನುಸಾರವಾಗಿ, 100
ರಾಸುಹೆಸುಗಳಿಗೆ ಒಂದು ಗೂಳಿಯ
ಮೇರೆ ಒಳ್ಳೆ ಜಾತಿ ಗೂಳಿಗಳನ್ನು ಸಾ
ಕಿ ಅವುಗಳ ಮೂಲಕ ಜಾತಿ ದನಗಳ
ನ್ನು ಪಡೆಯಲು ಪ್ರಯತ್ನಿಸಬೇಕು.

9) ಇದೇ ಮೇರೆ ಪ್ರತಿ ಗ್ರಾಮಗ
ಳಲ್ಲಿಯೂ, ಹಂದಿ, ಆಡು ಮತ್ತು
ಕೋಳಿಗಳನ್ನು ಸಾಕುವ ಕ್ರಮಗಳ
ನ್ನು ರೈತಾಪಿ ಜನರು ಕೈಗೊಳ್ಳಬೇಕು.

10) ಕೊಡಗಿಗೆ ಬೇಕಾದ ಜಾ
ನುವಾರುಗಳನ್ನು ಈ ದೇಶೀಯರು 5
ವರ್ಷಗಳಲ್ಲಿ ಸಾಕಿದ ಮೇಲೆ ಸರಕಾರ
ದವರು ಬೇರೆ ಪ್ರಾಂತ್ಯಗಳಿಂದ ದನಕ
ರುಗಳು ಇಲ್ಲಿಗೆ ಬಾರದಂತೆ ತಕ್ಕ ಕಾ
ನೂನು ಕಾಯಿದೆಗಳನ್ನು ಮಾಡ
ಬೇಕು.

11) ಸರಕಾರವು ಜಾನುವಾರುಗ
ಳನ್ನು ಸಾಕುವ ಹಲವಾರು ಪ್ರದರ್ಶ
ನಾ ಕೇಂದ್ರಗಳನ್ನು ಏರ್ಪಡಿಸಿ, ರೈತಾ
ಪಿ ಜನರಿಗೆ ಅದರಲ್ಲಿ ಅಭಿರುಚಿ ಹುಟ್ಟಿ
ಸುವ ಸೂತನ ಕ್ರಮಗಳನ್ನು ಜಾರಿಗೆ
ತರಬೇಕು.

12) ಈಗಿರುವ ಪಶು ವೈದ್ಯ ಇ
ಲಾಖೆಯವರ ಸಿಬ್ಬಂದಿಗಳನ್ನು ಸಾಕ
ಷ್ಟು ಮಟ್ಟಿಗೆ ಹೆಚ್ಚಿಸಿ, ಅವರ ಉ
ದ್ಯೋಗದಲ್ಲಿ ನೂತನ ಹುರುಪನ್ನುಂ
ಟುಮಾಡುವುದು ಸರಕಾರದ ಕರ್ತವ್ಯ
ವಾಗಿರಬೇಕು.

ಕೊಡಗಿನಲ್ಲಿ ಜಾನುವಾರುಗಳಿಗೆ
ಈ ವರ್ಷ ಸಂಭವಿಸಿದ ಭಯಂಕರವಾ
ದ ಜಾಡ್ಯದ ದೆಶೆಯಿಂದ ಪ್ರಜಾವರ್ಗ
ದವರಲ್ಲಿ ಉಂಟಾದ ಸಂತಾಪವೂ ಹಾ
ನಿಯೂ ಅವರಿಗೆ ಒಂದು ಪಾಠ ಸದೃಶ
ವಾಗಿದೆ. ಆದುಕಾರಣ ಕೊಡಗಿನ
ಸರಕಾರವು ಇನ್ನಾದರೂ ಎಚ್ಚೆತ್ತು
ಜಾನುವಾರುಗಳ ಏಳ್ಗೆಯನ್ನು ಬಯ
ಸುವ ಯೋಜನೆಯನ್ನು ಕೂಡಲೇ
ಜಾರಿಗೆ ತಂದು ದೇಶದ ಸಂಪದಾಭಿ
ವೃದ್ಧಿಯನ್ನು ಹೆಚ್ಚಿಸಿ, ಈ ಪುಟ್ಟ ದೇ
ಶವನ್ನು ಮೂದರಿ ಪ್ರಾಂತ್ಯವನ್ನಾಗಿ
ಮಾಡಬೇಕೆಂಬುದೇ ಘನ ಸರಕಾರದ
ವರಲ್ಲಿ ವಿನಂತಿಯಾಗಿದೆ.

— ಶೇಲಡಾ —

ಎಂಟಿ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರ
ಗಡ್ಡೆ, ತಜ್ಜನ್ಯ ಆಶಕ್ತತೆ
ಮೇಲೆ ರಾಮಬಾಣ; ಲಿ
ವರ, ಹೊಟ್ಟೆನೋವ್ಹ,
ಮಲಬದ್ಧತೆ, ಸುಧಾರಿಸಿ
ಶಕ್ತಿ ಬೆಳೆಸುತ್ತದೆ. ಕ್ವಿ
ನೈನ್ ಬದಲು ವೈದ್ಯ ಡಾಕ್ಟರರು ದವಾ
ಖಾನೆಗಳಲ್ಲಿ ಉಪಯೋಗಿಸುವರು.
1000 ಗುಳಿಗೆಗಳಿಗೆ ರೂ. 15-0-0,
100ಕ್ಕೆ ರೂ. 1-12-0. ಈ ಔಷಧಿ
ಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊ
ಟ್ಟವರಿಗೆ ಒಂದು ಸಾವಿರ ರೂ. ಬಹು
ಮಾನ ಕೊಡಲಾಗುವುದು. ಪ್ರತಿ ಊರಿ
ನಲ್ಲಿ ಮೂರಾಟಕ್ಕೆ ಏಜೆಂಟರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ,
ಸೋಲ್ ಏಜೆಂಟರು-
ಎಸ್. ಎಲ್. (ಅಪ್ಪುರಾವ್) ಧಾಕಪ್ಪ,
ಬಡವರ ಔಷಧಿ ಸರ್ವಿಸ್,
ಶಿರ್ಸಿ, ಉತ್ತರ ಕನ್ನಡ.

ಕೊ ಡ ಗು

ತಾ. ೨೦-೧೦-೧೯೪೪ನೇ ಶುಕ್ರವಾರ

ಸುರಪಾನ ನಿರೋಧ.

ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಕೊಡಗಿನಲ್ಲಿ ನಿಶಾಪಾನ ನಿರೋಧವನ್ನು ಜಾರಿಗೆ ತರಬೇಕೆಂಬ ಗೊತ್ತುವಳಿಯು ಪಾಸಾಗಿದೆ. ಪಾನ ನಿರೋಧವನ್ನು ಜಾರಿಗೆ ತರುವ ಅವಶ್ಯಕತೆಯ ಬಗ್ಗೆ ವಿಚಾರಶೀಲರಾರೂ ವಿರೋಧವೂಡಲಿಕ್ಕಿಲ್ಲ. ಜನತೆಯ ಗುಣ, ನಡತೆ, ಹಿತ ದೃಷ್ಟಿಯಿರುವ ಸರಕಾರವೂ ಈ ವಿಚಾರಕ್ಕೆ ವಿರುದ್ಧವಾಗಿ ವರ್ತಿಸಲಾರದು. ಕೊಡಗಿನಲ್ಲಿ ಒಮ್ಮೆ ಮೂದಕ ಪದಾರ್ಥಗಳ ಉಪಯೋಗವು ಕಡಿಮೆಯಾಗಿತ್ತು. ಆದರೆ ಇತ್ತೀಚೆಗೆ ಇದು ಹಬ್ಬಿ ದೇಶದ ಬಹು ಸಂಖ್ಯಾ ಜನರು ಈ ದುಶ್ಚಟಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಅನೇಕ ಕುಟುಂಬದ ಸಾಧ್ವೀಮಣಿಗಳು ಈ ಸುರಾಂಗನೆಯ ಮೋಹಕ್ಕೊಳಗಾದ ಪತಿಗಳಿಂದ ದಾರುಣ ದುಃಖಕ್ಕೀಡಾಗಿದ್ದಾರೆ. ಸಹಸ್ರಾರು ಮಕ್ಕಳು ಕುಟುಂಬದ ಅಧೋಗತಿಯಿಂದ ಜೀವನ ಪಥವನ್ನು ಕಳಕೊಂಡಿದ್ದಾರೆ. ಕೊಡಗಿನಲ್ಲಿ ಮೂದಕ ಪದಾರ್ಥದಿಂದ ಬರುವ ಉತ್ಪತ್ತಿಯು ಐದು ಲಕ್ಷಗಳಷ್ಟು ಆಂದರೆ ಕೊಡಗಿನ ಇಡೀ ಆದಾಯದ ಮೂರನೆ ಒಂದಂಶದಷ್ಟಿದೆಯೆಂದರೆ ನಾಡಿನಲ್ಲಿ ಕುಡುಕತನ ಎಷ್ಟರ ಮಟ್ಟಿಗೆ ಹಬ್ಬಿದೆಯೆಂಬುದಕ್ಕೆ ಬೇರೆ ಉದಾಹರಣೆಗಳು ಬೇಕಿಲ್ಲ. ಈ ದುಃಶ್ಚಟಕ್ಕೆ ತುತ್ತಾದವರು ನಾಡಿನ ಬಡವರೇ ಅಲ್ಲ; ನಗರದ ಅಧಿಕಾರಿ, ಶ್ರೀಮಂತರೂ ಸಹ ಇವಕ್ಕೆ ಶರಣಾಹೋಗಿ ತಮ್ಮ ಧನ, ಗೌರವಗಳಿಗೆ ತಿಲಾಂಜಲಿ ಈಯುತ್ತಿದ್ದಾರೆ. ಇಂಥಾ ಅನೀತಿಯುತವಾದ ಅಭ್ಯಾಸವನ್ನು ಪ್ರತಿಯೊಬ್ಬರೂ ತ್ಯಜಿಸಬೇಕು. ಸರಕಾರವು ಇದನ್ನು ನಿಲ್ಲಿಸಲು ಶಾಶನ ಸಭೆಯಲ್ಲಿ ಪಾಸಾದ ಗೊತ್ತುವಳಿಯನ್ನು ಜಾರಿಗೆ ತರಬೇಕು.

ದುಡ್ಡಿನ ಮೇಲೆ ಕಣ್ಣಿಟ್ಟವರು ನೀತಿ ನಡತೆಗೆ ಬೆನ್ನು ಹಾಕುವದು ಸ್ವಾಭಾವಿಕ. ಅದೇರೀತಿಯೇ ತನ್ನ ಪ್ರಜೆಗಳ ನೀತಿ ನಡತೆಗಳಿಗಾಗಿ, ತನಗೆ ವರ್ಷಕ್ಕೆ ಬರುತ್ತಿರುವ ಐದಾರುಲಕ್ಷ ರೂಪಾಯಿಗಳ ಆದಾಯವನ್ನು ಸರಕಾರವು ಬಲಿಕೊಡಲು ಸುಲಭದಲ್ಲಿ ಸಿದ್ಧವಾಗದು. ಈ ಆದಾಯವನ್ನು ನಿಲ್ಲಿಸಿದರೆ ದೇಶದ ಅನೇಕ ಕೆಲಸ ಕಾರ್ಯಗಳು ನಿಲ್ಲಬೇಕಾಗುವದೆಂದು ಹೇಳುವವರಿದ್ದಾರೆ. ಮೂದಕಪಾನೀಯಗಳನ್ನು ಪ್ರೋತ್ಸಾಹಿಸಿ ಆ ಮೂಲಕ ಬಡ ಬಗ್ಗರಿಂದ ಲಕ್ಷಾಂತರ ರೂಪಾಯಿಗಳನ್ನು ಗಳಿಸಿ, ಖಜಾನೆಯಲ್ಲಿ ಹಣ ಉಳಿಸಿ, ಅದನ್ನು ಕೇಂದ್ರ ಸರಕಾರಕ್ಕೆ ಸಾಲ ಕೊಡುವದರಿಂದಲೂ ಹೆಚ್ಚಿನ ಲಾಭ ಕಂಡುಬರುವದಿಲ್ಲ. ನಿಜ, ಈ ಹಣವು 'ಯುದ್ಧೋತ್ತರ ಪುನರ್ಘಟನೆಗಾಗಿ ಇಡಲ್ಪಟ್ಟದ್ದು'. ಆದರೆ ಬಡವರ ಹೊಟ್ಟೆಗೆ ಕಾಲು ಕೊಡುತ್ತಿರುವ ಈ ಮೂದಕ ಪದಾರ್ಥಗಳ ದುಶ್ಚಟವನ್ನು ನಿಲ್ಲಿಸುವದು ಯುದ್ಧೋತ್ತರ ಯೋಜನೆಗಳಲ್ಲಿ ತಿಲಕಪ್ರಾಯವಾದುದು. ಈ ತಳಹದಿಯನ್ನು ಹಾಕಿದರೆ ಅದರ ಮೇಲೆ ಕಟ್ಟುವ ಎಲ್ಲಾ ಯೋಜನೆಗಳೂ ಸುಗಮವಾಗಿ ಕೆಲಸ ಮಾಡುವವು. ಪಾನ ನಿರೋಧವನ್ನು ಜಾರಿಗೆ ತಂದರೆ ಸರಕಾರಕ್ಕೆ ಹಣದ ಅಡಚಣೆಯೂಗುವದು ನಿಜ. ಅನೇಕ ಕೆಲಸ ಕಾರ್ಯಗಳು ನಿಲ್ಲುವುದೂ ಸಹಜ. ಆದರೆ ಇಂದು ಈ ದುರಭ್ಯಾಸದಿಂದ ಆಗುವಷ್ಟು ಕೆಡುಕು ಈ ಹಣದ ಅಡಚಣೆಯಿಂದ ಆಗಲಾರದು. ಮಹಾತ್ಮ ಗಾಂಧಿಜಿಯವರು ಹೇಳಿದಂತೆ ಮನುಷ್ಯನ ಗುಣ, ನಡತೆ, ಶೀಲಗಳನ್ನು ಬಲಿಕೊಟ್ಟು, ಆದರಿಂದ ಸಂಪಾದಿಸಿದ ಹಣದಿಂದ ದೇಶದಲ್ಲಿ ವಿದ್ಯಾಪ್ರಸಾರ ಮೊದಲಾದ ಜನಹಿತ ಕಾರ್ಯಗಳನ್ನು ಮಾಡುವದು ಅನೈತಿಕವಾದುದು. ಜನತೆಗೆ ಕೊಡುವ ವಿದ್ಯೆ, ಇತರ ಸಲಕರಣೆಗಳು ಏತಕ್ಕಾಗಿ? ಮನುಷ್ಯನನ್ನು ಗುಣಾಢ್ಯನನ್ನಾಗಿ, ಸಮಾಜ ಹಿತೈಷಿಯಾಗಿ, ಹೆಚ್ಚೇಕೆ ಮನುಷ್ಯನನ್ನಾಗಿ ಮಾಡಲಿಕ್ಕಾಗಿ. ಇಂಥಾ ಪವಿತ್ರ ಮನುಷ್ಯನಲ್ಲಿ ಮೂದಕ ಪಾನೀಯಗಳ ಚಟವನ್ನು ಹೆಚ್ಚಿಸಿ ಆತನನ್ನು ಪಾಪ ಕೂಪದ ಅಂಧಕಾರಕ್ಕೆ ತಳ್ಳಿ ಪುನಹ ಮೇಲೆತ್ತಲು ಮಾಡುವ ಪ್ರಯತ್ನವೇಕೆ?

ಸುತ್ತೂ ಇರುವ ಪ್ರಾಂತಗಳಲ್ಲಿ ಬೇಕಾದ ಹಾಗೆ ಮೂದಕ ಪದಾರ್ಥಗಳು ದೊರೆಯುವಾಗ ಹೊರಗಿನಿಂದ ಕಳ್ಳ ಮಾರಾಟದ ಮೂಲಕ ದೇಶದೊಳಗೆ ಬರುವ ಮೂದಕ ಪದಾರ್ಥಗಳನ್ನು ತಡೆಯುವದು ಸಾಧ್ಯವಿಲ್ಲ; ಆದ್ದರಿಂದ ಇಲ್ಲಿ ಪಾನ ನಿರೋಧ ಅಸಾಧ್ಯವೆಂಬ ಸರಕಾರದ ವಾದವು ಸರಿಯಲ್ಲ. ಕೊಡಗಿನಲ್ಲಿ ಬತ್ತ ಹೆಚ್ಚಿದೆ. ಹೊರಗೆ ಸಾಗಿಸಿದರೆ ಹೇಳಿದ ಬೆಲೆ ದೊರೆಯುತ್ತದೆ. ಆದರೂ ಸಹ ಇದನ್ನು ಹೊರಗೆ ಸಾಗಿಸದಂತೆ ತಡೆದ ಸರಕಾರಕ್ಕೆ ಪಾನ ನಿರೋಧದ ವಿಚಾರದಲ್ಲಿ ಅಸಾಧ್ಯವಾಗುವದು ಹೇಗೆ? ಮೇಲಾಗಿ ಪಾನ ನಿರೋಧದ ಕಾರ್ಯಕ್ರಮದ ಯಶಸ್ವಿತೆಯು ಆ ಬಗ್ಗೆ ನಡೆಯುವ ಪ್ರಚಾರದ ಮೇಲೆ ನಿಂತಿದೆ. ಸರಕಾರವು ಮನಸಿಟ್ಟು ಯೋಗ್ಯ ರೀತಿ ಪ್ರಚಾರ ಮಾಡಿದರೆ ಕೊಡಗಿನಲ್ಲಿ ಪಾನ ನಿರೋಧವನ್ನು ಜಾರಿಗೆ ತರುವದು ಎಂದೂ ಕಷ್ಟವಲ್ಲ. ಇದರಿಂದ ಸರಕಾರಕ್ಕೆ ಕಡಿಮೆ ಬೀಳುವ ಉತ್ಪತ್ತಿಯನ್ನು ಕಂಡು ಹಿಡಿಯುವದೂ ಪ್ರಯಾಸವಲ್ಲ. ಆದ್ದರಿಂದ ಸರಕಾರವು ಪಾಸಾಗಿರುವ ಠರಾವನ್ನು ಅಂಗೀಕರಿಸಿ ಪಾನ ನಿರೋಧವನ್ನು ಜಾರಿಗೆ ತಂದು ಹಿಂದೂದೇಶದ ಉದ್ದಗಲಕ್ಕೆ ಅಮರವಾದ ಕೀರ್ತಿಯನ್ನು ಪಡೆಯಬೇಕು.

ಒಳದೇಶ.

ಈ ವರ್ಷದ ಕಾವೇರಿ ಜಾತ್ರೆಯಲ್ಲಿ ತೆಂಗಿನಕಾಯಿಗಳ ಮತ್ತು ರಾತ್ರಿ ದಾರಿಯಲ್ಲಿ ದೀಪಗಳ ಅಭಾವವು ಹೆಚ್ಚಾಗಿತ್ತಂತೆ.

ಬತ್ತದ ಕ್ರಯವನ್ನು ಏರಿಸಬೇಕೆಂಬ ಬಗ್ಗೆ ಜನರ ಪ್ರತಿನಿಧಿಗಳ ಡೆಪ್ಯುಟೇಶನು ಈ ತಾ. 31ರಲ್ಲಿ ಚೀಫ್ ಕಮಿಷನರನ್ನು ಭೇಟಿಯೂಗುವುದು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ಮಿಸ್. ಮುಂಜಾಂದಿರ ಸಿ. ಚಿಣ್ಣಮ್ಮನವರು ಕಳೆದ ಸೆಪ್ಟೆಂಬರಿನ ಇಂಟರ್ ವಿೂಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯೂಗಿರುವರು

ಪೊನ್ನಂಪೇಟೆ ಹೈಸ್ಕೂಲಿನ ನಾಲ್ಕನೆ ಫಾರಂನ ಹೆ. ಮೂಸ್ಟರಾಗಿದ್ದ ಮೆ. ಆಚ್ಚುತಬಾಳಿಗರವರು ಖಾಯಿಲೆಯೂಗಿ ಕೆಲಸಕ್ಕೆ ರಾಜಿನಾಮೆಕೊಟ್ಟ ಕಾರಣ ಅವರ ಬದಲು ವೈಸೂರಿನ ಶ್ರೀ ಯಂ. ರಾಜರಾವು, ಯುಂ. ಎ. ಬಿ. ಟಿ-ಯವರನ್ನು ಹೆ. ಮೂಸ್ಟರಾಗಿಯೂ, ಶ್ರೀ. ಜಿ. ಕೆ. ಮುತ್ತಣ್ಣನವರನ್ನು ಮತ್ತು ಸಿ. ಯಂ. ಗಣಪತ್ತಿ ಬಿ. ಎ. ಯವರನ್ನು ಅ. ಮೂಸ್ಟರುಗಳಾಗಿಯೂ ನೇವಿಸಲಾಗಿದೆ.

ಪೊನ್ನಂಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಹೆ. ಮೂಸ್ಟರಾಗಿದ್ದ ಶ್ರೀ. ಡಿ. ಯನ್. ಕೃಷ್ಣಯ್ಯನವರು ಆ. ಎಜುಕೇಶನ್ ಆಫೀಸರಾಗಿ ನೇಮಕವಾದ ಕಾರಣ ಅವರ ಬದಲು ಆ ಶಾಲೆಯ ಆ. ಮೂಸ್ಟರಾಗಿದ್ದ ಶ್ರೀ. ಬಿ.. ಎನ್. ಸುಬ್ಬಮ್ಮಯ್ಯನವರನ್ನು ಹೆ. ಮೂಸ್ಟರಾಗಿ ನೇವಿಸಲಾಗಿದೆ.

ಪೊನ್ನಂಪೇಟೆ ಬಾಳಲಿ ಗ್ರಾಮದಲ್ಲಿ ವ್ಯಾಪಾರಮಾಡುವ ಮಾಪಿಳ್ಳೆ ಉಮ್ಮರ್‌ರವರು ಕಾಗದವನ್ನು ಹೆಚ್ಚು ಕ್ರಯಕ್ಕೆ ಮಾರಿದರೆಂಬ ಆಪವಾದನೆ ಮೇಲೆ ವೀರಾಜಪೇಟೆ ಮುನಿಸಿಫ್ ಮೇಜಸ್ಟ್ರೇಟರು ಅವರಿಗೆ ರೂ. 35. ಜುಲ್ಮಾನೆ ವಿಧಿಸಿರುವರು.

ಪೊನ್ನಂಪೇಟೆಯ ವ್ಯಾಪಾರಿ ಮೂಪಿಳ್ಳೆ ಯು. ಯನ್. ಅಬ್ದು ಅಂಡ್ ಬ್ರದರ್ಸ್‌ರವರು ಸಿಗರೇಟು ಇಲ್ಲವೆಂದು ಹೇಳಿ ಹೆಚ್ಚಿನ ಬೆಲೆಗೆ ಮಾರಿದರೆಂಬ ಆಪಾದನೆಯ ಮೇಲೆ ಜಿಲ್ಲಾ ಮೇಜಿಸ್ಟ್ರೇಟರು ಅವರಿಗೆ ರೂ. 270 ರೂ. ಜುಲ್ಮಾನೆ ವಿಧಿಸಿರುವರು.

ಪೆಟ್ರೋಲ್ ಎಕ್ಸಯಿಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರಾಗಿ ಶ್ರೀ. ಬಲ್ಲಚಂಡ ಯಂ. ಕುಟ್ಟಿಪ್ಪನವರನ್ನು ದಕ್ಷಿಣ ಕನ್ನಡಕ್ಕೆ ನೇವಿಸಿರುವರು.

ಮಡಿಕೇರಿ ಸಿವಿಲ್ ಆಸ್ಪತ್ರೆಗೆ ವೈಸೂರಿನ ಶ್ರೀ. ಬಿ. ಗೌರಮ್ಮ ಎಂ. ಬಿ. ಬಿ. ಎಸ್ ರವರನ್ನು ಲೇಡಿ ಡಾಕ್ಟರರಾಗಿ ನೇವಿಸಿರುವರು.

ಸೋಮವಾರಪೇಟೆಯಲ್ಲಿ ನಡೆದ ಕೊಲೆಕೇಸಿನ ಸಂಬಂಧ-ಬೆಟ್ಟಿಕುರುಬರ ಮಾದ ಎಂಬವನನ್ನು ಕಳೆದ ವಾರ ಪಾತಿಗೆ ಕೊಡಲಾಯಿತು.

ಕಳೆದ ಕಾವೇರಿ ಜಾತ್ರೆಯಲ್ಲಿ ಹರಿಜನನೊಬ್ಬನು ಭಾಗಮಂಡಲದ ಸಂಗಮ ಸ್ಥಳದಲ್ಲಿ ವಿಂದು ಪಿಂಡಪ್ರಾಕೆ ದನೆಂದು ಅವನನ್ನು ಪೊಲೀಸರು ಹಿಡಿದಿದರೆಂದೂ, ದೇವಸ್ಥಾನಕ್ಕೆ ಸಂಬಂಧಿಸಿದವರು ಅವನಿಗೆ ರೂ. 10 ಜುಲ್ಮಾನೆ ವಿಧಿಸಿದರೆಂದೂ ಸುದ್ದಿ.

ಮಡಿಕೇರಿಯಲ್ಲಿದ್ದ ಪಾರ್ವತಿ ಎಂಬ ಸುಮಾರು ನಲುವತ್ತು ವಯಸ್ಸಿನ ಹೆಂಗಸು ನಿನ್ನೆ ರಾತ್ರಿ ಯಾವದೋ ಕಾರಣಕ್ಕಾಗಿ ವಿಷತೆಗೆದುಕೊಂಡಳೆಂದೂ, ಆಕೆಯನ್ನು ಕೂಡ್ಲೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡುತ್ತಿರುವರೆಂದೂ ತಿಳಿಯಬಂದಿದೆ.

ಶ್ರೀಮಂಗಲನಾಡಿನ ಅನೇಕ ಭಾಗಗಳಲ್ಲಿ ದನಗಳ ರೋಗವೂ ಇನ್ನೂ ಪ್ರಬಲವಾಗಿದೆಯೆಂದೂ ದನಗಳು ಹೆಚ್ಚಾಗಿ ಸಾಯುತ್ತಿರುವವೆಂದೂ ತಿಳಿಯಬಂದಿದೆ.

ಮಡಿಕೇರಿಯಲ್ಲಿ ಪ್ಲೇಗಿನ ಹಾವಳಿ ಕಡಿಮೆಯೂಗಿದೆ. ಸಿಡುಬು ಕಾಯಿಲೆ ಇನ್ನೂ ಅಡಗಿಲ್ಲ. ಸಿಂತಾಳಿ, ಅಂಗರೆಕಜ್ಜಿ ಮೊದಲಾದುವು ಬಹುವಾಗಿ ಹಬ್ಬಿವೆ.

ಶನಿವಾರಸಂತೆ ಹೋಬಳಿಯ ಎಲ್ಕನೂರು ಗ್ರಾಮಕ್ಕೆ 2 ವಾರಗಳ ಹಿಂದೆ ಸುಮಾರು 50 ಜನೆಗಳ ಹಿಂಡು ಬಂದು ಸುಮಾರು 300 ಬಟ್ಟೆ ಭೂಮಿಯ ಬೆಳೆಯನ್ನು ತಿಂದು, ತುಳಿದು ನಾಶಮಾಡಿವೆಯೆಂದು ತಿಳಿದುಬಂದಿದೆ.

ಈ ತಾ. 7 ರಲ್ಲಿ ಶ್ರೀ. ಬಿ. ಬಸವಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಶನಿವಾರಸಂತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸರ್ಕಾರದವರು ಭತ್ತದ ಕ್ರಯವನ್ನು ಗಾಡಿಗೆ ರೂ. 150 ಕ್ಕಾದರೂ ಏರಿಸಬೇಕೆಂದು ತೀರ್ಮಾನಿಸಿ, ಈ ಬಗ್ಗೆ ಡೆಪ್ಯುಡೇಶನ್ ಹೋಗಲು ಶ್ರೀ ಹೆಚ್. ಯಂ. ಪುಪ್ಪಣ್ಣನವರನ್ನು ಆರಿಸಲಾಯಿತು.

ತಾ. 15 ರಲ್ಲಿ ಕೊಡ್ಲಿಪೇಟೆಯಲ್ಲಿ ಶ್ರೀ. ಪುಪ್ಪಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲೂ ಹೀಗೆಯೇ ತೀರ್ಮಾನಿಸಿ, ಶ್ರೀ. ಗನ್ನಿಸಾಹೇಬರನ್ನು ಪ್ರತಿನಿಧಿಯೂಗಿ ಆರಿಸಲಾಯಿತು.

ವಿನಂತಿ.

ಕಸ್ತೂರ್ ಬಾ ಸ್ಮಾರಕ ನಿಧಿಗೆ ಕೊಡಗಿನಿಂದ ಸಂಗ್ರಹವಾದ ರೂ. 14,370ನ್ನು ಯೋಗ್ಯ ರೀತಿಯಿಂದ ವಿನಿಯೋಗಿಸುವ ಮತ್ತು ಮುಂದಿನ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರಲು ಒಂದು ಸಮಿತಿಯನ್ನು ನೇವಿಸುವ ಸಲುವಾಗಿ ತಾ. 27—10—44ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಮಡಿಕೇರಿ ಸಹಕಾರಿ ಸೆಂಟ್ರಲ್ ಬ್ಯಾಂಕ್ ಆಫೀಸಿನಲ್ಲಿ ಈ ನಿಧಿಗೆ ಧನ ಸಹಾಯ ನೂಡಿದವರ ಸಭೆಯೊಂದು ಜರಗುವದು. ಈ ಯ ಏಟ್ಟು ಎಲ್ಲರೂ ತಪ್ಪದೆ ಹಾಜರಾಗಬೇಕಾ ವಿನಂತಿ.

ಮಡಿಕೇರಿ, ತಾ. 19.10.44. } ಬಿ. ಡಿ. ಗಣಪತಿ
ಕಾರ್ಯದರ್ಶಿ,
ಕೊ. ಕ. ಗಾ. ಸ್ಮಾ. ನಿಧಿ

ರಣಭೇರಿ.

ಮಿತ್ರದಳಗಳು ಮುಂದರಿಯುವಂತೆ ಜರ್ಮನರು ತಡೆಗಟ್ಟಿ ಘೋರಕದನ ಮಾಡುತ್ತಿರುವರು. ತಮ್ಮ 'ಸೀಜ್‌ಫ್ರೈಡ್' ಕೋಟೆಯಲ್ಲಿ ನಿಂತು ಮೇಲೇರಿಬರುವ ಮಿತ್ರ ಸೇನಾಪ್ರವಾಹವನ್ನು ತಡೆದು ನಿಲ್ಲಿಸುವರು. 'ಸೀಜ್‌ಫ್ರೈಡ್' ಗೋಡೆಯು ಜರ್ಮನಿಯರ ಗತ್ತುಗಾರಿಕೆಗೆ ಸರಿಯಾಗಿ ಈ ಕಳೆದ ಒಂದು ತಿಂಗಳಿಂದ ಮಿತ್ರರ ಪ್ರಹಾರಗಳನ್ನು ತಡೆದು ಇನ್ನೂ ಅಭೇದ್ಯವಾಗಿ ನಿಂತಿದೆ. ಅದು ಬಿರುಕುಬಿಡುವ ಚಿಹ್ನೆಗಳೂ ಕಂಡುಬರುವದಿಲ್ಲ. ಈ ವರೆಗೆ ಹಿಂದೆ ಓಡುತ್ತಿದ್ದ ಜರ್ಮನರು ತಮ್ಮ ದೇಶದ ಗಡಿಯಲ್ಲಿ ಅಪ್ರತಿಮವಾದ ಶೌರ್ಯದಿಂದ ಕಾದಲು ಸಹಾಯಕವಾದುದೇನು? ಇಷ್ಟು ಶಕ್ತಿಯಿದ್ದವರು ಫ್ರಾನ್ಸಿನಲ್ಲಿ ಸ್ಥಿರಪಟಿಸದೆ ಹಿಂಜರಿಯಲು ಕಾರಣವೇನು? ಎಂದು ಕೆಲವರು ಕೇಳುತ್ತಾರೆ. ಇದು ಜರ್ಮನರ ಮುಂದಣ ಲೋಚನೆಯು ಫಲ ಮಿತ್ರರು ಫ್ರಾನ್ಸಿನಲ್ಲಿ ಇಳಿದಾಗಲಿಂದ ಅವರನ್ನು ಅಲ್ಲಿಯೇ ಪ್ರತಿಭಟಿಸಿ ತಮ್ಮ ಶಕ್ತಿಯನ್ನೆಲ್ಲಾ ಅಲ್ಲಿ ಉಪಯೋಗಿಸಿದ್ದ ಪಕ್ಷ ಜರ್ಮನರ ಜೈತನ್ಯವು ಇಷ್ಟರಲ್ಲಿ ಉಡುಗಿ ಹೋಗಬಹುದಿತ್ತೇನೋ? ಯಾಕೆಂದರೆ ಫ್ರಾನ್ಸಿನಲ್ಲಿ ನಿಂತು ಹೋರಾಡಲು ನೈಸರ್ಗಿಕವಾಹಿ ಅನುಕೂಲವಿಲ್ಲ. ಅಲ್ಲಿ ಯುದ್ಧಮಾಡುವದೆಂದರೆ ಹೆಚ್ಚು ಜನರನ್ನು ಆಹುತಿಕೊಟ್ಟಂತೆ. ಆದ್ದರಿಂದ ಕಡಿಮೆ ಜನರಿಂದ ಯಶಸ್ವಿಯಾಗಿ ಯುದ್ಧಮಾಡಬಲ್ಲ ನೈಸರ್ಗಿಕ ಠಾಣೆಗಳಿಗೆ ಸಾಧ್ಯವಿದ್ದಲ್ಲಿ ಹೋರಾಡುತ್ತಾ ಅವರು ಹಿಂತೆಗೆದುಕೊಂಡರು. ಇದರಿಂದ ಜರ್ಮನರಿಗೆ ಸಮಯವೂ ದೊರೆಯಿತು. ಹಾಲೆಂಡಿನ ಭಾಗದಲ್ಲಿಯ ಗಡಿಯನ್ನು ಇನ್ನಷ್ಟು ಭದ್ರಮಾಡಿಕೊಳ್ಳಲು ಅನುದೊರೆಯಿತು. ಹೀಗೆ ಸಿದ್ಧರಾಗಿ ಜರ್ಮನರು ತಮ್ಮ ಅತ್ಯುಗ್ರ ಪ್ರತಿಭಟನೆಗೆ ತೊಡಗಿದ್ದಾರೆ. ಇದರಿಂದ ಮಿತ್ರರಿಗೆ ನಿರೀಕ್ಷಿಸಿದಷ್ಟು ಜಯದೊರೆಯುತ್ತಿಲ್ಲ. ಪ್ರಾಕೃತಿಕ ಸನ್ನಿವೇಶದ ಮತ್ತು ಕೃತ್ರಿಮ ವ್ಯವಸ್ಥೆಗಳ ಮೂಲಕ ಸ್ವದೇಶ ರಕ್ಷಣೆಯನ್ನು ಜರ್ಮನರು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಪೂರ್ವಭಾಗದಲ್ಲಿ ರಷ್ಯನರೇ ಮುಂದರಿಯುತ್ತಿದ್ದಾರೆ ಇತ್ತ ಮಿತ್ರರು ಗ್ರೀಸ್ ಭಾಗದಲ್ಲಿ ಹೊಸ ಅಭಿಯೋಗ ಪ್ರಾರಂಭಿಸಿದ್ದಾರೆ ಇದಾವುದರಿಂದಲೂ ಜರ್ಮನಿಯ ಧೃತಿಗೆಡದೆ ಇವೆಲ್ಲ ನಿರೀಕ್ಷಿಸಿದ ಪರಾಭವಗಳೆಂದೂ, ಮಾತೃದೇಶದ ರಕ್ಷಣೆಗಾಗಿ ಮಾಡಬೇಕಾದ ಸ್ವಾರ್ಥತ್ಯಾಗಗಳೆಂದೂ ಪರಿಗಣಿಸಿ ಹೋರಾಡುತ್ತಿದೆ. ಜರ್ಮನಿಯ ಗೋಡೆಯನ್ನು ಮುರಿದು ಒಳನುಗ್ಗಲಿಕ್ಕೆ ಇನ್ನೂ ಕೆಲವು ತಿಂಗಳುಗಳು ಬೇಕಾಗಬಹುದು. ಜರ್ಮನಿಯು ಬೇಗ ಸೋಲುವಂತೆ ಕಂಡುಬರುವದಿಲ್ಲ. ಸೋಲುವ ಸಂದರ್ಭದಲ್ಲಿಯೂ ಕೂಟ ಯುದ್ಧವನ್ನು, ಗೊರಿಲ್ಲಾ ಯುದ್ಧ ಕ್ರಮವನ್ನು ಅನುಸರಿಸಿ ಗೆದ್ದವರ ಬಳಿ ಜಯಹ್ಯವಾಗುವಂತೆ ಅದು ಮಾಡುವದರಲ್ಲಿ ಸಂಶಯವಿಲ್ಲ.

ಈಗ ಅತೀ ಪ್ರಖರವಾದ ಯುದ್ಧ ನಡೆಯುತ್ತಿರುವಪೇಕ್ಷರೆ ವಿಜೆನ್ ಭಾಗದಲ್ಲಿ ಹಿಟ್ಲರನು ತನ್ನ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿದಂತೆ ಇಲ್ಲಿ ಕಂಡುಬರುತ್ತಿದೆ. ಮಿತ್ರರು ಅನೇಕ ದಿನಗಳಿಂದ ಇದನ್ನು ವಶಪಡಿಸಿಕೊಳ್ಳುವದು ಸಾಧ್ಯವಾಗಿರುವದಿಲ್ಲ. ಜರ್ಮನಿಯ ಹೆಗ್ಗಳಿಕೆಗೆ ತಕ್ಕಂಥಾ ಶಕ್ತಿ ಪ್ರದರ್ಶನವು ಇಲ್ಲಿ ಆಗುತ್ತಿದೆ. ಜರ್ಮನರು ಈ ರಂಗದ ಎಲ್ಲಾ ಭಾಗಗಳಲ್ಲಿಯೂ ಬಹು ಹುರುಪಿನಿಂದ ಯುದ್ಧ ಮಾಡುತ್ತಿದ್ದಾರೆ. ಮುಂದಿನ ಚಳಿಗಾಲದ ವರೆಗೆ ಈ ಯುದ್ಧವನ್ನು ಅವರು ಸಾಗಿಸಿದ್ದೇ ಆದರೆ ಶೀತಕಾಲದಲ್ಲಿ ಟ್ಯಾಂಕುಗಳನ್ನು ಉಪಯೋಗಿಸಲಾಗದ ಕಾರಣ ಮಿತ್ರರ ಮುನ್ನಡೆಯೂ ಗದೆಂದೂ, ಚಳಿಗಾಲದ ನಂತರ ಯೋಗ್ಯವ್ಯವಸ್ಥೆಯಿಂದ ಪುನಃ ಮಿತ್ರರನ್ನು ಪ್ರತಿಭಟಿಸುವದು ಶಕ್ಯವೆಂದೂ ಜರ್ಮನರು ತರ್ಕಿಸಿದಂತಿದೆ. ಆದರೆ ಮಿತ್ರರು ಈ ಚಳಿಗಾಲದೊಳಗಾಗಿ ಇಲ್ಲಿಯ ಯುದ್ಧ ಮುಗಿಸಿಬಿಡಬೇಕೆಂಬ ಹಂಬಲದಲ್ಲಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂಬುದನ್ನು ಮುಂದೆ ನೋಡಬೇಕಿದೆ.

ಈ ಮಧ್ಯೆ ಜರ್ಮನರ ಅದ್ವಿತೀಯ ನಾಯಕರಾದ ಯೂಕೆ ಜಗತ್ತಿನ ಯುದ್ಧ ಕಲಾಕೋವಿದರಲ್ಲಿ ನಿಸ್ಸೀಮರಾದ ಫೀಲ್ಡ್ ಮಾರ್ಶಲ್ ರೋಮೆಲ್ಲರು ಸತ್ತರು ಎಂಬ ವಾರ್ತೆ ಬಂದಿದೆ. ಇದು ಜರ್ಮನಿಯಿಂದ ಬಂದ ವಾರ್ತೆಯೆಂಬುದಾಗಿ ತಿಳಿದುಬಂದಿದೆ. ಈ ವಾರ್ತೆಯು ನಿಜವಿದ್ದರೆ ಜರ್ಮನಿಯು ತನ್ನ ಪುತ್ರರತ್ನಗಳಲ್ಲೊಬ್ಬರನ್ನೂ, ಹಿಟ್ಲರನ ಬಲಗೈ ಬಂಟರಲ್ಲಿ ಅದ್ವಿತೀಯರನ್ನೂ ಚರಿತ್ರಾರ್ಹ ಕೀರ್ತಿಯನ್ನು ಪಡೆದ ವೀರರನ್ನೂ ಕಳೆದುಕೊಂಡಿತು. ಕೆಲವು ದಿನಗಳಿಗೆ ಹಿಂದೆ ತಲೆಗೆ ಪೆಟ್ಟಾಗಿದ್ದು ಆದರಿಂದಲೇ ಮೃತ್ಯುಮುಖರಾದರೆಂದು ವಾರ್ತೆಯು ತಿಳಿಸುತ್ತಿದೆ. 1940ರ ಮೊದಲು ರೋಮೆಲ್ಲರ ಹೆಸರು ಯಾರಿಗೂ ತಿಳಿದಿರಲಿಲ್ಲ. ಆದರೆ 1940 ರಿಂದೀಚೆಗೆ ತನ್ನ ಯುದ್ಧ ಕೌಶಲ, ವೀರಧೀರತನಗಳಿಂದ ಇಡೀ ಜಗತ್ತನ್ನೇ ದಂಗುಗೊಳಿಸಿದರು. ಲರ್ಮನ ಕಾಲದ ನೆಪೋಲಿಯನನಂತೆ, ಜೂಲಿಯಸ್ ಸೀಸರನಂತೆ ಅದ್ವಿತೀಯ ಶೌರ್ಯ ಪ್ರತಾಪಗಳನ್ನು ತೋರಿ ದೇಶಕ್ಕಾಗಿ ಮಡಿದರು. ಇಂಥಾ ಪುತ್ರರತ್ನವನ್ನು ಪಡೆದಂಥಾ ಯಾವ ದೇಶವಾದರೂ ಹೆಮ್ಮೆಪಡತಕ್ಕದ್ದೆ. ಶತ್ರುವಾದರೂ ಸಹ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು, ಸೇನಾನಿ ಮಾಂಟ್‌ಗೋಮರಿಯವರು ಅವರ ರಣಕೌಶಲವನ್ನು ಕೊಂಡಾಡಿದ್ದಾರೆ. ರೋಮೆಲ್ಲರು ನಿಜವಾಗಿಯೂ ಸತ್ತಿದ್ದರೆ ಜರ್ಮನಿಗೆ ತುಂಬಲಾರದ ನಷ್ಟವಾಯಿತೆಂದು ಹೇಳುವ ಅಗತ್ಯವಿಲ್ಲ.

ಇತ್ತ ಪೂರ್ವಭಾಗದಲ್ಲಿ ಮಿತ್ರರು ಜಪಾನರ ಮೇಲೆ ಧಾಳಿಯನ್ನು ಕ್ರಮಬದ್ಧ ಬಲಪಡಿಸುತ್ತಿದ್ದಾರೆ. ಫಾರ್ಮೊಸಾ ದ್ವೀಪದ ಮೇಲೆ ಕಳೆದ ಸೋಮವಾರ ಬಲವಾದ ಧಾಳಿಮಾಡಿದರು. ಜಪಾನರೂ ಅತ್ಯುಗ್ರ ರೀತಿಯಿಂದ ಪ್ರತಿಭಟಿಸಿದ್ದಾರೆ. ಈ ಒಂದು ದಿನ ಜಪಾನರ 91 ವಿಮಾನಗಳನ್ನು ಉರುಳಿಸಲಾಯಿತೆಂದು ಮಿತ್ರರ ವರದಿಯಿದೆ. ಅಂತು ಅಕ್ಟೋಬರ್ ತಾ. 9 ರಿಂದ ತಾ. 17ರ ವರೆಗೆ ಜಪಾನರ ಒಟ್ಟು 73 ಹಡಗುಗಳನ್ನು 670 ವಿಮಾನಗಳನ್ನು ನಾಶಪಡಿಸಿರುವದಾಗಿ ಮಿತ್ರರು ಹೇಳುತ್ತಾರೆ.

ಈ ಮಧ್ಯೆ ಚೀನೀಯರ ಪರಿಸ್ಥಿತಿ ವಿಶಮಾವಸ್ಥೆಗೆ ಬಂದಿದೆ. ತಮ್ಮ ಪರಿಸ್ಥಿತಿಯು ಚೆನ್ನಾಗಿಲ್ಲವೆಂದು ಚೀನಾದ ಸರ್ವಾಧಿಕಾರಿ ಚಿಯಾಂಗ್‌ಕೈಶೆಕರು ತಮ್ಮ ಮೊನ್ನೆಯ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ. ಜಪಾನರು ಬರ್ಮಾದಿಂದ ಹಿಮ್ಮೆಟ್ಟಿದರು. ಶಾಂತಿಸಾಗರದಲ್ಲೂ ಹಿಮ್ಮೆಟ್ಟುತ್ತಿರುವರು. ಆದರೆ ಚೀನಾದಲ್ಲಿ ಅವರು ಬಹು ಮಟ್ಟಿನ ಪ್ರಗತಿಪಡೆದಿದ್ದಾರೆ. ನಾನು ಹಿಂದೊಮ್ಮೆ ಸೂಚಿಸಿದ್ದಂತೆ ಜವಾನರು ಬರ್ಮಾದಿಂದ ಹಿಂತೆಗೆದುಕೊಂಡುದು ಚೀನಾ ಯುದ್ಧವನ್ನು ಮುಗಿಸುವದಕ್ಕಾಗಿ ಎಂಬುದು ಸತ್ಯವಾಗಿ ಪರಿಣಮಿಸಿದೆ, ಇದರಿಂದ ಸರ್ವರಿಗೂ ಕಳವಳವಾಗಿದೆ. ಮಿತ್ರರು ಶಾಂತಿಸಾಗರದಲ್ಲಿ ಎಷ್ಟೇ ಶೌರ್ಯತೋರಿಸುತ್ತಿರಲಿ, ಈ ಶೌರ್ಯಪ್ರತಾಪಗಳಿಂದಲೇ ಅಂದರೆ ಕೇವಲ ನೌಕಾಯುದ್ಧದಿಂದಲೇ ಜಪಾನರನ್ನು ಸೋಲಿಸುವದು ಸಾಧ್ಯವಲ್ಲ. ಜಪಾನರು ಕ್ವಾಂಗ್ಸಿ ಪ್ರಾಂತದ ರಾಜಧಾನಿ ಕ್ವಿಲಿನ್‌ನನ್ನು ವಶಪಡಿಸಿ ಪೂರ್ವಕರಾವಳಿಯ ಭೂಚೌವನ್ನು ಆಕ್ರಮಿಸಿದ್ದಾರೆ. ಚೀನಾದ ಪರಿಸ್ಥಿತಿ ಇಷ್ಟು ಶೋಚನೀಯವಾಗಲು ಅವರಿಗೆ ಸರಿಯಾದ ಸಾಹಿತ್ಯಸರಬರಾಯಿಲ್ಲದುದೇ ಕಾರಣವಾಗಿದೆ. ಆದ್ದರಿಂದ ಮಿತ್ರರು ಶಕ್ತಿಮೀರಿ ಸಹಾಯ ಮಾಡಿದರೆ ಮಾತ್ರ ಚೀನವು ಉಳಿಯುವದು. ಮತ್ತು ಜಪಾನನ್ನು ಸುಲಭದಲ್ಲಿ ಸೋಲಿಸುವದೂ ಸಾಧ್ಯವಾಗುವದು.

ನೂರು ರೂಪಾಯಿಗಳಿಗೆ
ಐದು ವರ್ಷ ಗ್ಯಾರಂಟಿಯ
ನೂರು ವಾಚುಗಳು.



ಎರಡು ಕುಪ್ಪಿ ಪುಷ್ಪರಾಜ ಹೇರ್ ಆಯಿಲ್ ಕೊಂಡುಕೊಳ್ಳುವವರಿಗೆ ಒಂದು ನಿಕ್ಕಲ್ ಕೇಸಿನ ಡೆಮ್ಮಿ ರಿಸ್ಟ್ ವಾಚ್, 1 ಟಾರ್ಚ್‌ಲೈಟ್, 1 ಫೌಂಟನ್ ಪೆನ್, 1 ಸೇಫ್ಟಿ ರೇಜರ್, 1 ಸೋಪು, 1 ಕೈವಸ್ತ್ರ, 1 ಜೊತೆ ಗುಂಡಿಗಳು, 4 ಕೈಲೇಸ್‌ಗಳು, 1 ಪೇನಾಚಾಕು, 1 ಕತ್ತರಿ, 1 ಉಂಗುರ ಮತ್ತು 240 ಮನೋಹರ ಚಿತ್ರಗಳು. ಅಲ್ಲದಿದ್ದರೆ ಒಂದು ಪಾಕೆಟ್ ವಾಚ್. ಈ ಮೇಲಿನ ಸಾಮಾನುಗಳು ಏನೂ ಸಂಶಯವಿಲ್ಲದೆ ವಾಚುಗಳನ್ನು ಪಡಕೊಂಡವರಿಗೆ ಬಹುಮಾನವಾಗಿ ದೊರೆಯುತ್ತೆ. ಪೋಸ್ಟೇಜ್ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ 0–12–0.

IDEAL TRADING CO.,
140/2 upper Chitpur Road,
CALCUTTA (K).

—೦೦—

ಶ್ರೀ ಶಾರದಾ ಕಾಫಿ ನಿಲಯದಲ್ಲಿ ಬೀಳಿಯನ್ನು ಕ್ರಮವಾಗಿ ಹುರಿದು ಪುಡಿಮಾಡಿ ಕೊಡಲ್ಪಡುತ್ತೆ.

ಹುರಿದು ಪುಡಿಮಾಡಿಸುವವರು ಬೆಳಿಗ್ಗೆ 9½ ಗಂಟೆ ಮೇಲೆ ಕಾಫಿ ಬೀಳಿಯನ್ನು ಕಳುಹಿಸಬೇಕು.

ದರ:—
ಮಣ 1ಕ್ಕೆ ರೂ. 1-8-0
ಅಳತೆ ಸೇರು 1ಕ್ಕೆ
ರೂ. 0-1-6

SHRI SHARADA COFFEE HOME,
McDOWELLS BUILDINGS, *MERCARA.*

The Canara Banking Corporation Limited.

(Incorporated in British India)

ETD— **Head Office—UDIPI, (S. K.)** —1906

Paid up capital .. .. .. *Rs. 14,38,255*
Reserves .. .. *Rs. 4,10,000*
Total working Resources .. .. *Exceed Rs. 1 Crore*

ANNOUNCEMENT.

A Branch of the Bank will be opened shortly at
1) **BOMBAY.**

— ಶುಭಾಶಯಗಳು —

ಕೊಚ್ಚಿಕಾರ್ ಬ್ರದರ್ಸ್, ಲಿ.

ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
5)

ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ವೈದ್ಯ ಪರೀಕ್ಷಕರಿಗೂ
ಮತ್ತು ಹಿತಚಿಂತಕರಿಗೂ ತಮ್ಮ

ದೀಪಾವಳಿ

ಶುಭಾಶಯಗಳನ್ನು ಬಯಸುತ್ತಾರೆ.

ಧಾತು ವೃದ್ಧಿ ರಸಾಯನ (ZANDU)

" ರ್ಯಾಕ್ಯೂ—ಫಾಸ್ಫೋ—ನೂಲ್ಟ್ "

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನನಿಮ. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋನೂಲ್ಟ್, ಹೆಪೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಪೆಪ್ಟನ್, ಸಾಲ್, ನೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಟಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಶಾಪುಗಳಲ್ಲಿದೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
7) **ಗೋಖಲೆ ರೋಡ್, ಬೋಂಬೆ.**

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

43) **ಸ್ಥಾಪನೆ:—೧೮೭೭.**

ಇತ್ತೀವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ	೧೬,೪೪,೮೮,೦೦೦ ,,
	ಆಸ್ತಿ	೬,೩೦,೪೬,೦೦೦ ,,
	ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	೮,೩೮,೦೧,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಬೊಜಲಗು ರೂ. 95,000, ಜನೂ ಬಂದ ಠೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3½. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 3½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಆದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

— ಬೆಲೆ ಹೆಚ್ಚಿದರೆ ಬರಗಾಲವಿಲ್ಲ —

ಯುದ್ಧ ಪ್ರಾರಂಭವಾದನಂತರ ಜನ ಜೀವನದಲ್ಲಿ ಒಂದು ರೀತಿಯ ಕಷ್ಟವು ಉಪಸ್ಥಿತವಾಗಿ ಜೀವನವು ನೀರಸವಾಗತೊಡಗಿದೆ. ಸಂತೆಯ ಪ್ರತಿಯೊಂದು ಸಾಮಾನಿನ ಕ್ರಯವು ವಿಪರೀತ ಏರಿ ಬಡವರು ತೀರಾ ಕಂಗಾಲಾಗಿದ್ದಾರೆ. ಇದಕ್ಕಾಗಿ ಸರಕಾರದವರು ಧಾರಣೆ ನಿಯಂತ್ರಣವನ್ನು ಜಾರಿಗೆ ತಂದು ಆದೇ ರೀತಿ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಹತೋಟಿಯಲ್ಲಿಟ್ಟಿರುವರು. ಹೀಗೆ ಧಾರಣೆ ನಿಯಂತ್ರಿಸುವದು ಅತ್ಯಗತ್ಯವಾದರೂ ಅದು ಮೈಯಲ್ಲಿ ಕೂತ ಸೊಳ್ಳೆಯನ್ನು ಕೊಲ್ಲುವ ಪ್ರಯತ್ನದಲ್ಲಿ ಮನುಷ್ಯನನ್ನೇ ಕೊಂದು ಹಾಕಾವ ರೀತಿಯಾಗಬಾರದು. ಕೊಡಗಿನಲ್ಲಿ ಬತ್ತದ ಬೆಲೆಯನ್ನು 120 ಪರೆಯ ಗಾಡಿಗೆ ರೂ. 115 ಎಂಬುವುದಾಗಿ ನಿಶ್ಚಯಿಸಲಾಗಿದೆ. ಈ ಧಾರಣೆಯು ಪೇಟೆಯ ಇತರ ಯಾವ ವಸ್ತುಗಳ ಧಾರಣೆಯನ್ನೂ ಹೊಂದಿಕೊಂಡಿಲ್ಲ. ಬಡ ರೈತನ ಜೀವನಾಧಾರವಾದ ಬತ್ತದ ಬೆಲೆಯನ್ನು ಹೀಗೆ ನಿಶ್ಚಯಿಸಿದ್ದು ಆರ್ಥ ಶಾಸ್ತ್ರದ ಯಾ ಇನ್ನಾವ ದೃಷ್ಟಿಯಿಂದಲೂ ಯೋಗ್ಯವಾದುದಲ್ಲ. ರೈತನು ತನ್ನ ಜೀವನಕ್ಕೆ ಬೇಕಾದ ಇತರ ವಸ್ತುಗಳನ್ನೆಲ್ಲಾ ಪೇಟೆಯಿಂದ ಪಡೆಯಬೇಕು. ಇವುಗಳನ್ನು ಪಡೆಯಲು ಆತನಿಗೆದುದ್ದು ಒದಗಿಸುವ ವಸ್ತುವು ಬತ್ತ. ಪೇಟೆಯ ಇತರ ವಸ್ತುಗಳ ಧಾರಣೆಯು ಆಗಾಗ ಬದಲಾಗುತ್ತದೆ. ಬತ್ತ ಗಾಡಿಗೆ ರೂ. 115 ಎಂದು ನಿಶ್ಚಯಿಸಿದಾಗ ಇದ್ದ ಇತರ ವಸ್ತುಗಳ ಕ್ರಯವು ಈಗ ಹೆಚ್ಚಿದೆ. ಪೇಟೆಯಲ್ಲಿ ಸಾಮಾನಿನ ರಖಂ ಇದ್ದ ಹಾಗೆ ವಸ್ತುಗಳ ಬೆಲೆ ವ್ಯತ್ಯಾಸವಾಗುತ್ತಿರುವಾಗ ಬತ್ತದ ಬೆಲೆಯೆನ್ನು ಒಂದೇ ನಿಘಂಟಿನಲ್ಲಿ ಇಟ್ಟದ್ದು ಯೋಗ್ಯವಲ್ಲ. ಮೂರು ತಿಂಗಳಿಗೆ ಯಾ ಆರು ತಿಂಗಳಿಗೊಮ್ಮೆಯಾದರೂ ಪರಿಶೀಲಿಸಿ ಇದನ್ನು ಬದಲು ಮಾಡತಕ್ಕದ್ದು ಅತ್ಯಗತ್ಯ. ಇತರ ವಸ್ತುಗಳು ಯೋಗ್ಯ ಬೆಲೆಗೆ ಮೊರೆಯುವುದಾದರೆ ಬತ್ತಕ್ಕೆ ಹೆಚ್ಚಿನ ಧಾರಣೆ ಸಿಕ್ಕಬೇಕೆಂದು ರೈತನು ಎಂದೂ ಹೇಳುವುದಿಲ್ಲ.

ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಬಹು ಮಟ್ಟಿಗೆ ಕೆಳಗಿರಿಸಿದ ಕಾರಣದಿಂದಲೇ ದೇಶದಲ್ಲಿ ಬರಗಾಲ ದುರ್ಭಿಕ್ಷವೆಯೆಂಬುವುದಾಗಿ ತಜ್ಞರನೇಕರು ಅಭಿಪ್ರಾಯಪಟ್ಟಿದ್ದಾರೆ. ಜೀವನಾವಶ್ಯಕವಾದ ವಸ್ತುಗಳ ಬೆಲೆಯು ಅವುಗಳನ್ನು ಬೆಳೆಸಿ ಮಾರುವವನಿಗೆ ಇನ್ನೂ ಬೆಳೆಸುವ ಪ್ರೋತ್ಸಾಹವನ್ನು ಕೊಡುತ್ತಿರಬೇಕು. ಹೆಚ್ಚು ಲಾಭವಲ್ಲದಿದ್ದರೂ ಬೆಳೆಸಿದರೆ ನಷ್ಟವಿಲ್ಲ; ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂಬ ನಂಬಿಕೆ ಕೊಡುವಂತಿರಬೇಕು. ಹಾಗಾದರೆ ರೈತನು ತಾನಾಗಿಯೇ ಸಾಧ್ಯವಾದಲ್ಲೆಲ್ಲಾ ಬೆಳೆಸಲು ಪ್ರಯತ್ನಿಸುತ್ತಾನೆ. ಧಾರಣೆಯನ್ನು ಈ ರೀತಿ ರೈತನಿಗೆ ಪ್ರೋತ್ಸಾಹ ಕೊಡುವಂಥಾ ಮಟ್ಟಕ್ಕೆ ಏರಿಸಿದರೆ 'ಹೆಚ್ಚು ಬೆಳೆಯಿರಿ' 'ಕಡಿಮೆ ತಿನ್ನಿರಿ' 'ಧಾರಾಳವಾಗಿ ಉಳಿಸಿರಿ' ಎಂಬ ಪ್ರಚಾರದ ಅವಶ್ಯಕತೆಯೇ ಇಲ್ಲ. ಈ ರೀತಿ ರೈತನು ಹುರುಪುಳ್ಳವನಾದರೆ ದೇಶದಲ್ಲಿ 'ನಾಸ್ತಿ ದುರ್ಭಿಕ್ಷಂ'. ತಾನು ಬೆಳೆಸುವ ವಸ್ತುಗಳಿಗೆ ಪರಿಯೋದ ಬೆಲೆ ದೊರೆಯದ ಕಾರಣ ರೈತನು ಸ್ವವಸಾಯವನ್ನು ಸರಿಯಾಗಿ ಮಾಡದೆ ಇನ್ನಿತರ ಮಾರ್ಗಗಳನ್ನು ಹುಡುಕುವನು. ಆದರಲ್ಲೂ ಸಹಕಾರುಗಳಿಲ್ಲದ, ಮಳೆ ಸರಿಯಾಗಿಲ್ಲದ, ಆಳು ದೊರೆಯದ ಈ ಕಷ್ಟ ಕಾಲದಲ್ಲಿ ಆತನಲ್ಲಿ ಸ್ವವಸಾಯದ ಬಗ್ಗೆ ಜಿಗುಪ್ಸೆ ಹುಟ್ಟುವದರಲ್ಲಿ ಸಂಶಯವಿಲ್ಲ. 'ಇಂಥಾ ಸಂದರ್ಭದಲ್ಲಿ ಆತನಿಗೆ ಆಶಾಕಿರಣವೊಂದರ ಅವಶ್ಯಕತೆಯಿದೆ. ಇಂಥಾ ಆಶೆಯು ಬತ್ತದ ಬೆಲೆಯನ್ನು ಏರಿಸುನದರಿಂದಲ್ಲದೆ ಮತ್ತಾವುದರಿಂದಲೂ ಆಗಲಾರದು.

ನಿಜ, ಬತ್ತದ ಬೆಲೆಯನ್ನು ಏರಿಸುನದರಿಂದ ಭತ್ತವನ್ನು ಕ್ರಯಕ್ಕೆ ಪಡೆದು ಉಪಯೋಗಿಸುನರಿಗೆ ತೊಂದರೆಯಾಗುವದ್ದು. ಇಂಥಾವರ ಹಿತವನ್ನು ಸಾಧಿಸಲು ಸರಕಾರವು ಮುಂದೆ ಬರಬೇಕು. ಮೈಸೂರು, ಕೊಚಿನ್, ತಿರುವಂಕೂರು ಸರಕಾರಗಳು ಹೆಚ್ಚಿನ ಬೆಲೆಗೆ ದವಸವನ್ನು ಕೊಂಡು ಉಪಯೋಗಿಸುವವರಿಗೆ ನ್ಯಾಯವಾದ ಬೆಲೆಗೆ ಸರಬರಾಯಿ ಮಾಡುತ್ತಾರೆ. ಇದರಿಂದ ಬರುವ ನಷ್ಟವನ್ನು ಸರಕಾರವೇ ನಿರ್ವಹಿಸುತ್ತಿದೆ. ಇಂಥಾ ಒಂದು ಏರ್ಪಾಡನ್ನು ಇಲ್ಲಿಯ ಸರಕಾರವು ಮಾಡಬೇಕು. ಕ್ರಯಕ್ಕೆ ಪಡೆದು ಉಪಯೋಗಿಸುವವರಿಗೆ ಬೇಕಿರುವಷ್ಟು ಬತ್ತವನ್ನು ಪಡೆದು ಅಲ್ಲಲ್ಲಿ ಅಂಗಡಿಗಳನ್ನು ತೆರೆದು ಅವುಗಳ ಮೂಲಕ ರೇಶನ್ ಪದ್ಧತಿಯಿಂದ ಇದನ್ನು ಸರಬರಾಯಿ ಮಾಡಬಹುದು.

ಇಂಡಿಯಾ ಸರಕಾರಕ್ಕೆ ಸೇರಿದ್ದು ಈ ಬತ್ತದ ವ್ಯವಹಾರ. ಗಾಡಿಗೆ ರೂ. 115 ನಿಶ್ಚಯಿಸಿದ್ದೂ ಇಂಡಿಯಾ ಸರಕಾರವೇ. ಆದ್ದರಿಂದ ಧಾರಣೆ ಬದಲಾಯಿಸುವದು ಸ್ಥಳೀಯ ಸರಕಾರದ ಕೈಯ್ಯಲ್ಲಿಲ್ಲ ಎಂಬುವುದಾಗಿ ಸ್ಥಳೀಯ ಸರಕಾರದ ವಾದಸರಣಿಯೊಂದಿದೆ. ಸಂಜಂಘಪಟ್ಟ ಪ್ರಾಂತಗಳ ಅಭಿಮತವನ್ನು ತೆಗೆದುಕೊಳ್ಳದೆ ತಮ್ಮಿಚ್ಛೆಯಂತೆ ಕುರುಡು ರಾಜ್ಯಭಾರ ನ್ನೆಂದೂ ಕೇಂದ್ರ ಸರಕಾರವು ಮಾಡದು. ದೇಶದ ಸದ್ಯದ ಪರಿಸ್ಥಿತಿ, ರೈತನಿಗಿರುವ ತೊಂದರೆ, ಇತರ ಸಾಮಾನುಗಳ ಬೆಲೆ ಇವುಗಳನ್ನು ವಿವೇಚಿಸಿ ಯೋಗ್ಯ ರೀತಿಯಿಂದ ಕೇಂದ್ರ ಸರಕಾರದ ಮುಂದಿಟ್ಟರೆ ನಿಜವಾಗಿಯೂ ಬತ್ತದ ಬೆಲೆಯನ್ನು ಏರಿಸುವದರಲ್ಲಿ ಸಂಶಯವಿಲ್ಲ. ಈ ವರ್ಷ ವ್ಯವಸಾಯಕ್ಕೆ ಅಡ್ಡಬಂದ ತೊಂದರೆಗಳಿಂದಾಗಿ ಸುಮಾರು 1000 ಏಕ್ರೆ ಜಮೀನು ಪಾಳು ಬಿದ್ದಿದೆಯೆಂದು ಸರಕಾರದ ಅಂದಾಜಿನಲ್ಲೇ ಕಂಡುಬಂದಿರುವಾಗ ಮುಂದೆ ಪರಿಸ್ಥಿತಿ ಹೇಗಾಗಬಹುದೆಂಬದನ್ನು ಬೇರೆ ವಿವರಿಸುವದು ಬೇಡ. ಆದ್ದರಿಂದ ಸ್ಥಳೀಯ ಸರಕಾರವು ಕೊಡಗಿನ ಪರಿಸ್ಥಿತಿಯನ್ನು ಯೋಗ್ಯ ರೀತಿ ಕೇಂದ್ರ ಸರಕಾರದ ಮುಂದಿಟ್ಟು ಬಡ ರೈತರಿಗೆ 120 ಪರೆಯ ಗಾಡಿಗೆ ಕಡಿಮೆ ರೂ. 150 ದೊರೆಯುವಂತೆ ಮಾಡಬೇಕಿದೆ.

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿರಿದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿವಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಜೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,
39) **ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.**